ಪದಬಂಧ

# ಪ್ರಶ್ನಾಂಕಣ

## ಚಂದ್ರ ಹುಟ್ಟಿದ್ದು ಹೇಗೆ?

ಅದು ಸಂಭವಿಸಿದ್ದು ತುಂಬ ಹಿಂದೆ; ಈಗ್ಗೆ ಸಮೀಪ ನಾಲ್ಕುನೂರ ಐವತ್ತು ಕೋಟಿ ವರ್ಷ ಹಿಂದೆ. ಆಗ ಭೂಮಿಗೆ ಇನ್ನೂ ಮೂರು ಕೋಟಿ ವರ್ಷ ಶೈಶವದ ವಯಸ್ಸು; ಹಾಗಾಗಿ ಅದರದು ಬಿಸಿ ಚೆಂಡಿನಂಥ ತನು; ಭೂ ಖಂಡಗಳು, ಕಡಲು, ವಾಯುಮಂಡಲ ಏನೂ ಇನ್ನೂ ಇರದಿದ್ದ ಪರಿಸ್ಥಿತಿ.

ಆ ಸ್ಥಿತಿಯ ಆ ಕಾಲದಲ್ಲಿ ಸುಮಾರು ಈಗಿನ ಮಂಗಳ ಗ್ರಹ ಗಾತ್ರದ ಕ್ಷುದ್ರಗ್ರಹದಂಥ ಕಾಯವೊಂದು ಭೂ ಗುರುತ್ವಕ್ಕೆ ಸಿಲುಕಿ ಧರೆಗೆ ಎರಗುವ ಹಾದಿ ಹಿಡಿಯಿತು. ಬಂದೂಕದ ಗುಂಡಿನ ಹತ್ತುಪಟ್ಟು ವೇಗದಲ್ಲಿ ಅನತಿ ಕಾಲದಲ್ಲೇ ಆ ಕಾಯ ಭೂಮಿಗೆ ಅಪ್ಪಳಿಸಿತು (ಚಿತ್ರ-1)

ಆ ಸಂಘರ್ಷದ ತೀವ್ರತೆ ಎಷ್ಟಿತ್ತೆಂದರೆ ಆಗ ಉದ್ಭವಿಸಿದ ಶಾಖದಿಂದ ಹಾಗೆ ಬಡಿದ ಕ್ಷುದ್ರಗ್ರಹ ಸಂಪೂರ್ಣ ಕರಗಿಹೋಯಿತು. ಜೊತೆಗೆ ಬಡಿತ ಸಂಭವಿಸಿದ ಸ್ಥಳದಿಂದ ಭೂ ನೆಲದ ಕೆಳಗಿನ ಶಿಲಾಪಾಕ ಭಾರೀ ಪ್ರಮಾಣದಲ್ಲಿ ಚಿಮ್ಮಿ ಕ್ಷುದ್ರಗ್ರಹ ದ್ರವ್ಯದೊಡನೆ ಬೆರೆತು ಬಹಳ ದೂರಕ್ಕೆ- ಲಕ್ಷಾಂತರ ಕಿ.ಮೀ. ದೂರಕ್ಕೆ- ಎರಚಲ್ಪಟ್ಟಿತ್ತು. ಹಾಗೆ ಚಿಮ್ಮಿದ ಇಡೀ ದ್ರವ್ಯ ಭೂ ಗುರುತ್ವದ ಸೆಳೆತಕ್ಕೊಳಗಾಗಿ ಭರದಿಂದ ಸುತ್ತುತ್ತಿದ್ದ ಭೂಮಿಯ ಸುತ್ತ ದಟ್ಟ ಮೋಡದ ಉಂಗುರದಂತೆ ಹರಡಿತು (ಚಿತ್ರ-2)

ಹಾಗೆ ಹರಡದಿ ಶಿಲಾದ್ರವ್ಯ ಕ್ಷಿಪ್ರವಾಗಿ ತಣಿಯತೊಡಗಿ ಚಿಕ್ಕ ಚಿಕ್ಕ ತುಣುಕುಗಳಾಗಿ, ಅವೆಲ್ಲ ಅಲ್ಲಲ್ಲೇ ಬೆರೆಯುತ್ತ, ಒಂದಾಗುತ್ತ, ಕಡೆಗೆ ಎರಡು ಉಪಗ್ರಹಗಳು- ದೊಡ್ಡದೊಂದು, ಚಿಕ್ಕದೊಂದು- ಮೈದಳೆದು ಭೂಮಿಯನ್ನು ಸುತ್ತ ತೊಡಗಿದುವು (ಚಿತ್ರ-3)

ಅಲ್ಲಿಂದ ಮುಂದೆ ಒಂದೆರಡು ಕೋಟಿ ವರ್ಷಗಳು ಕಳೆವ ವೇಳೆಗೆ ಚಿಕ್ಕ ಉಪಗ್ರಹ ದೊಡ್ಡ ಉಪಗ್ರಹಕ್ಕೆ ಅಪ್ಪಳಿಸಿ ಅದರೊಡನೆ ಸಂಪೂರ್ಣ ಬೆರೆತು ಹೋಯಿತು. ಹಾಗೆ ಅಂತಿಮವಾಗಿ ಉಳಿದು ಭೂಮಿಯನ್ನು ಸುತ್ತತೊಡಗಿದ




ಏಕೈಕ ಕಾಯವೇ ಚಂದ್ರ (ಚಿತ್ರ-4,5). ಚಿಕ್ಕ ಉಪಗ್ರಹ ಬಡಿದಾಗ ರೂಪುಗೊಂಡ ಅತ್ಯಂತ ಬೃಹತ್ ಕುಳಿಗಳೇ ಚಂದ್ರನ ಮೇಲ್ಮೈನ 'ಸಮುದ್ರ'ಗಳು. ನೀರಿನ ಹನಿಯೂ ಇಲ್ಲದ ಸಾಗರ ಸದೃಶ ವಿಸ್ತಾರದ ಬರಡು ಹಳ್ಳಗಳು ಅವು. ಹುಣ್ಣಿಮೆಯ ರಾತ್ರಿಗಳಲ್ಲಿ ನಮಗೆದುರಾದ ಪೂರ್ಣಚಂದ್ರನ ವದನದಲ್ಲಿ ಕಾಣುವ ಕಪ್ಪು ಮಚ್ಚೆಗಳು ಈ ಹಳ್ಳಗಳೇ.

ಇರುಳಿನಾಗಸದ ಅತಿ ಉಜ್ವಲ ಅತಿ ಸುಂದರ ಕಾಯವಾಗಿ, ಬೆಳದಿಂಗಳ ಸೆಲೆಯಾಗಿ, ಕಾವ್ಯಾಲಂಕಾರಗಳಿಗೆ ಸ್ಫೂರ್ತಿಯಾಗಿ ಧರೆಯ ಏಕೈಕ ಸಂಗಾತಿಯಾಗಿರುವ ಚಂದ್ರ ಹುಟ್ಟಿದ್ದು ಹೀಗೆ. ■




**ಎಡದಿಂದ ಬಲಕ್ಕೆ:**

1. ಕೋವಿಯನ್ನೇಕೆ ಹಿಡಿದಿದ್ದಾನೆ, ಗಣೇಶ? (4)
3. ವೃದ್ಧರೆಂದರೇ ನೆನಪಾಗುವ ಸಾಗರವೇ? (3)
4. ಆದರ್ಶ ಪುರುಷನ ಸಾಕ್ಷಾತ್ಕಾರವಾಯಿತು (3)
6. ಕುಸುಮಗಳನ್ನೇ ಪೇರಿಸಿ ಹಿತಕರ ಪೀಠವೇ? (4)
7. ಒಬ್ಬೊಬ್ಬರೂ ಅಲ್ಲಿ ಕಂಡದ್ದು ಬರೀ ಬರಗಾಲ (3)
9. ಕುಸುಮಗಳನ್ನು ಸಂಗ್ರಹಿಸಲು ಮೂಮಜಾನೆಯೇ ಸರಿ (3)
11. ಸಂಶೋಧನಾ ಕೆಲಸಗಳ ಒಟ್ಟು ಸಂಖ್ಯೆ ಹತ್ತು ಮುಟ್ಟಿದೆ (3)
13. ತರಬೇತು ಪಡೆಯಲು ಬಂದನೇ ದಡ್ಡ? (3)
15. ಕಂಸನಿಗೇನು ಗೊತ್ತು, ಇಂಥ ಹಡಗು ಪಡೆ? (4)
17. ಯಾವನೇ ಅಕ್ಕಾ, ಈ ತರುಣ? (3)
18. ಕೂಗಳತೆಯಲ್ಲೇ ಇದ್ದಾಳೆ ಸ್ನೇಹಿತೆ (3)
19. ಮುಸುಕು ತೆರೆದೊಡನೆ ಪ್ರತ್ಯಕ್ಷ ಗೌರೀ ಪುತ್ರ (4)

**ಮೇಲಿಂದ ಕೆಳಕ್ಕೆ:**

1. ಒದಿಸುವುದು ಕಡ್ಡಾಯ ಎಂದು ನಿಯಮ ಮಾಡು (3)
2. ದಕ್ಷಿಣೆಗಾಗಿ ಎಷ್ಟು ದೊಡ್ಡ ಹೋರಾಟ ನೋಡಿ (3)
3. ವಾಸ್ತುವಿಜ್ಞಾನದ ದುರುಪಯೋಗವೇ ಈಗಿನ ಸತ್ಯ ವಿಷಯ (3)
5. ಹಾಗೆ ಸುಮ್ಮನಿರಬೇಡ, ವಂದಿಸು (3)
7. ಬಾಲ್ಯದಿಂದಲೂ ಆತ ಶ್ರೇಷ್ಠ, ಎಲ್ಲ ಬಲ್ಲವ (3)
8. ಶಿಖರವನ್ನೇರಿ ನಿಂತಿದ್ದಾನೆ ವಿಲಾಸಪ್ರಿಯ (3)
9. ಮನಬಂದಂತೆ ನಡೆವಾಗಲೂ ವಿನಯಶೀಲತೆ (3)
10. ವಿಕಾರ ಮನದವನ ಮಗ ಹೇಗೆ? (3)
12. ಶತಾವರಿಯನ್ನು ಸೇವಿಸಿ ನುರು ವರ್ಷ ಬದುಕಿದವ (3)
14. ನಾನಾ ಪದಾರ್ಥಗಳನ್ನು ದಾನ ಮಾಡುವ ಸಂಪ್ರದಾಯ (3)
15. ಕರೆಗಳನ್ನು ಸ್ವೀಕರಿಸಲು ಒಬ್ಬ ಕೆಲಸದಾಳು (3)
16. ಘನತೆಯನ್ನು ಪ್ರದರ್ಶಿಸಲು ಹೀಗೆ ಹಾರುವುದೇ? (3)

■ ಎನ್. ವಾಸುದೇವ್

### ಪದಬಂಧ 03-10-2013 ರ ಉತ್ತರಗಳು

**ಎಡದಿಂದ ಬಲಕ್ಕೆ:**

1. ಅಸಂಭವ; 3. ಕೆನಡ; 4. ನಿಶ್ಚಿತ; 6. ಕುಂಟುನೆಪ; 8. ಸಾಗುವಳಿ; 10. 'ಣಗುಯೋವ'; 12. 'ರವಾಡಿಬ'; 16. ನೆನಪು; 17. ವಕೀಲ; 18. ರಮ್ಯಸ್ಥಳ.

**ಮೇಲಿಂದ ಕೆಳಕ್ಕೆ:**

1. ಅಡವಿ; 2. ವನಿತೆ; 3. ಕೆತ್ತನೆ; 5. ತರಗು; 6. ಕುಂಭಕೋಣ; 7. ಪರಾಭವ; 8. ಸಾಹುಕಾರ; 9. 'ಳಿವಳುಬ'; 11. ಯೋಜನೆ; 13. ವಾಚಾಲ; 14. ನೂಪುರ; 15. ಕವಳ.